# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 983 |
| ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 24-02-2022 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು. |

| ಪ್ರಶ್ನೆ | ಉತ್ತರ |
|---|---|
| ಅ. ರಾಜ್ಯದ ಒಳಾಡಳಿತ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳು ಯಾವುವು; | 1. ಪೊಲೀಸ್ ಇಲಾಖೆ.<br>2. ಕಾರಾಗೃಹ ಮತ್ತು ಸುಧಾರಣಾ ಸೇವೆಗಳು.<br>3. ಗೃಹರಕ್ಷಕ ದಳ ಮತ್ತು ಪೌರರಕ್ಷಣೆ ಇಲಾಖೆ.<br>4. ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.<br>5. ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ.<br>6. ಅಭಿಯೋಗಗಳು ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ.<br>7. ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ (ನಿ). |
| ಆ. ಒಳಾಡಳಿತ ಇಲಾಖೆಯು ಕೇಂದ್ರ ಮತ್ತು ರಾಜ್ಯ ಕಾಯಿದೆಗಳು ಒಳಗೊಂಡಂತೆ ಅನುಷ್ಠಾನಗೊಳಿಸುತ್ತಿರುವ ಕಾಯಿದೆಗಳು ಯಾವುವು ಮತ್ತು ಇವುಗಳ ಆಚರಣೆಗೆ ರೂಪಿಸಿರುವ ನಿಯಮಗಳು ಯಾವುವು; (ಪೂರ್ಣ ವಿವರ ನೀಡುವುದು) | **ಪೊಲೀಸ್ ಇಲಾಖೆ:-**<br>ಭಾರತ ಸರ್ಕಾರವು ಕಾಲ-ಕಾಲಕ್ಕೆ ಕಾನೂನು ಮತ್ತು ಕಾಯ್ದೆಗಳನ್ನು ರೂಪಿಸಿ, ಅಧಿಸೂಚನೆಯನ್ನು ಹೊರಡಿಸುತ್ತದೆ. ಹಾಗೆಯೇ ಪ್ರಸ್ತುತ ಜಾರಿಯಲ್ಲಿರುವ ಕಾನೂನುಗಳಿಗೆ ಅವಶ್ಯವಿರುವ ತಿದ್ದುಪಡಿಗಳನ್ನು ತಂದು ಅಧಿಸೂಚನೆ ಹೊರಡಿಸುತ್ತದೆ.<br><br>ಪೊಲೀಸ್ ಇಲಾಖೆಯಲ್ಲಿ ಪ್ರಚಲಿತದಲ್ಲಿರುವ ಕಾಯ್ದೆಗಳು ಈ ಕೆಳಕಂಡಂತಿದೆ:<br>➢ ಭಾರತ ದಂಡ ಸಂಹಿತೆ.<br>➢ ದಂಡ ಪ್ರಕ್ರಿಯೆ ಸಂಹಿತೆ.<br>➢ ಕೇಂದ್ರೀಯ ವಿಶೇಷ ಕಾಯ್ದೆಗಳು.<br>➢ ಕರ್ನಾಟಕ ರಾಜ್ಯ ವಿಶೇಷ ಮತ್ತು ಸ್ಥಳೀಯ ಕಾಯ್ದೆಗಳು.<br><br>ಈ ಕಾನೂನು ಮತ್ತು ಕಾಯ್ದೆಗಳಲ್ಲಿನ ನಿರ್ದೇಶನ/ನಿಯಮಗಳ ಅನುಸಾರ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಹಾಗೂ ಕಾಲ-ಕಾಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತರುವ ಹಾಗೂ ಪ್ರಸ್ತುತ ಜಾರಿಯಲ್ಲಿರುವ ಕಾಲ-ಕಾಲಕ್ಕೆ ತಿದ್ದುಪಡಿಯೊಂದಿಗೆ ಹೊರಡಿಸುವ ಕಾನೂನುಗಳನ್ನು ಅನುಷ್ಠಾನಗೊಳಿಸಿ, ಅದರಂತೆ ಕಾರ್ಯ ನಿರ್ವಹಿಸುತ್ತದೆ.<br><br>**ಕಾರಾಗೃಹ ಮತ್ತು ಸುಧಾರಣಾ ಸೇವೆಗಳು:-**<br>ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಕಾಯ್ದೆಗಳು ಈ ಕೆಳಕಂಡಂತಿದೆ:<br>1. ಕರ್ನಾಟಕ ಕಾರಾಗೃಹಗಳ ಅಧಿನಿಯಮ-1963<br>2. ಕರ್ನಾಟಕ ಕಾರಾಗೃಹಗಳ ನಿಯಮಗಳು-1974<br>3. ಕರ್ನಾಟಕ ಅಭಿವೃದ್ಧಿ ಮಂಡಳಿಯ ಅಧಿನಿಯಮ-2021<br>4. ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ-2021 |

| | |
|---|---|
| | **<u>ಗೃಹರಕ್ಷಕ ದಳ ಮತ್ತು ಪೌರರಕ್ಷಣೆ ಇಲಾಖೆ:-</u>**<br>ಗೃಹರಕ್ಷಕ ಕಾಯಿದೆ 1962 ಮತ್ತು ಗೃಹರಕ್ಷಕ ನಿಯಮಗಳು 1963 ರ ಅಡಿಯಲ್ಲಿ ಗೃಹರಕ್ಷಕ ಸ್ವಯಂ ಸೇವಕ ಇಲಾಖೆಯು ರಚನೆಗೊಂಡು ಕರ್ತವ್ಯ ನಿರ್ವಹಿಸುತ್ತಿದೆ.<br><br>ಪೌರರಕ್ಷಣಾ ಕಾಯಿದೆ ಹಾಗೂ ನಿಯಮಗಳು 1968ರ ಅಡಿಯಲ್ಲಿ ಪೌರರಕ್ಷಣೆಯು ರಚನೆಗೊಂಡು ಕಾರ್ಯನಿರ್ವಹಿಸುತ್ತಿದೆ.<br><br>**<u>ಅಗ್ನಿಶಾಮಕ ಮತ್ತು ತುರ್ತು ಸೇವೆಗಳು:-</u>**<br>ಅಗ್ನಿಶಾಮಕ ಅಧಿನಿಯಮ-1964, ನಿಯಮಗಳು ಮತ್ತು ಕೈಪಿಡಿ:- ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಕಾಯಿದೆಗಳು.<br><br>ಪ್ರಸ್ತುತ ಅಗ್ನಿಶಾಮಕ ಅಧಿನಿಯಮ-1964 ಚಾಲ್ತಿಯಲ್ಲಿದ್ದು, ಸದರಿ ಅಧಿನಿಯಮ ತಿದ್ದುಪಡಿಗಾಗಿ ಕ್ರಮ ವಹಿಸಲಾಗುತ್ತಿದೆ.<br><br>ರಾಷ್ಟ್ರೀಯ ವಿಪತ್ತು ನಿರ್ವಾಹಣಾ ಪ್ರಾಧಿಕಾರ(NDMA)-2005ರ ಅಧಿನಿಯಮರಂತೆ ಪ್ರತಿ ರಾಜ್ಯವು ತನ್ನದೆ ಆದಂತಹ ರಾಜ್ಯ ವಿಪತ್ತು ಸ್ಪಂದನ ನಿರ್ವಹಣೆ (SDRF) ತಂಡಗಳನ್ನು ಪ್ರತ್ಯೇಕವಾಗಿ ರಚಿಸಿ, ರಾಷ್ಟ್ರೀಯ ವಿಪತ್ತು ನಿರ್ವಹಣೆಪಡೆ (NDRF) ಮಾರ್ಗದರ್ಶನದಂತೆ ಪರಿಹಾರ ಕಾರ್ಯಗಳನ್ನು ನಿರ್ವಹಿಸಬೇಕಿದೆ.<br><br>ಮುಂದುವರೆದು ಒಳಾಡಳಿತ ಇಲಾಖೆಯು ಕೇಂದ್ರ ಮತ್ತು ರಾಜ್ಯ ಕಾಯಿದೆಗಳು ಒಳಗೊಂಡಂತೆ ಅನುಷ್ಠಾನಗೊಳಿಸುತ್ತಿರುವ ಕಾಯಿದೆಗಳು ಯಾವುದೇ ಇರುವುದಿಲ್ಲ.<br><br>**<u>ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ:-</u>**<br>ಅನ್ವಯಿಸುವುದಿಲ್ಲ.<br><br>**<u>ಅಭಿಯೋಗಗಳು ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ:-</u>**<br>ಐ.ಪಿ.ಸಿ, ಸಿ.ಪಿ.ಸಿ, ಅರಣ್ಯ ಕಾಯ್ದೆ, ಎಸ್.ಸಿ/ಎಸ್.ಟಿ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ, ಮೋಟಾರು ವಾಹನ ಕಾಯ್ದೆ, ಸಾಕ್ಷ್ಯಅಧಿನಿಯಮ, ಕರ್ನಾಟಕ ಪೊಲೀಸ್ ಕಾಯ್ದೆ, ಎನ್.ಡಿ.ಪಿ.ಎಸ್ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ, ವನ್ಯ ಜೀವಿ ಸಂರಕ್ಷಣಾ ಕಾಯಿದೆ, ಅಬಕಾರ್ರಿ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಔಷಧ ನಿಯಂತ್ರಣ ಕಾಯ್ದೆಂತಹ ಪ್ರಮುಖ ಕಾಯ್ದೆಗಳನ್ನೊಳಗೊಂಡಂತೆ ಶಿಕ್ಷೆಗೆ ಒಳಪಡಿಸಬಹುದಾದಂತಹ ಇತರೆ ಪ್ರಮುಖ ಅಪರಾಧಿಕ ಕಾಯ್ದೆಗಳು.<br><br>ಕೇಂದ್ರ ಹಾಗೂ ರಾಜ್ಯ ಕಾಯ್ದೆಗಳ ಅಡಿಯಲ್ಲಿ ಕಡ್ಡಾಯವಾಗಿ ರೂಪಿಸಿರುವ ನಿಯಮಗಳನ್ನು ನ್ಯಾಯಾಲಯದಲ್ಲಿ ಪಾಲಿಸಲಾಗುತ್ತಿದೆ. |

...3

| | |
|---|---|
| | **ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ (ನಿ):–**<br>ನಿಗಮವು ಕಂಪನಿ ಕಾಯ್ದೆಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ. |
| ಇ. ಒಳಾಡಳಿತ ಇಲಾಖೆ ಈ ಕಾಯಿದೆಗಳ ಅಡಿಯಲ್ಲಿ ನಿರ್ವಹಿಸಬೇಕಾಗಿರುವ ಕಾರ್ಯಗಳು ಮತ್ತು ಕರ್ತವ್ಯಗಳು ಯಾವುವು ಮತ್ತು ಈ ಕರ್ತವ್ಯ ಮತ್ತು ಕಾರ್ಯನಿರ್ವಹಣೆಗೆ ಇಲಾಖೆಯಲ್ಲಿರುವ ಸಂಘಟನೆ ಮತ್ತು ರಚನೆಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | **ಪೊಲೀಸ್ ಇಲಾಖೆ:–**<br>ಪ್ರಶ್ನೆ ಸಂಖ್ಯೆ (ಆ) ರಲ್ಲಿ ಉತ್ತರಿಸಲಾಗಿದೆ.<br><br>**ಕಾರಾಗೃಹ ಮತ್ತು ಸುಧಾರಣಾ ಸೇವೆಗಳು:–**<br>ಕಾರಾಗೃಹ ಸುಧಾರಣೆ ಸೇವೆ ಇಲಾಖೆಯು ಬಂದಿಗಳಿಗೆ ಸಂಬಂಧಿಸಿದ ಕಾರ್ಯಗಳ ನಿರ್ವಹಣೆ ಮತ್ತು ದೈನಂದಿನ ಕಛೇರಿಯ ಕಾರ್ಯಗಳ ನಿರ್ವಹಣೆಯ ಕರ್ತವ್ಯ ನಿರ್ವಹಿಸುತ್ತಿದೆ.<br><br>**ಗೃಹರಕ್ಷಕ ದಳ ಮತ್ತು ಪೌರರಕ್ಷಣೆ ಇಲಾಖೆ:–**<br>ಸ್ವಯಂ ಸೇವಕ ಗೃಹರಕ್ಷಕರನ್ನು ಪೊಲೀಸ್ ಇಲಾಖೆಗೆ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಬಂದೋಬಸ್ತ್ ಕರ್ತವ್ಯಕ್ಕೆ ಸಹಾಯಕರನ್ನಾಗಿ ನಿಯೋಜಿಸಲಾಗುತ್ತಿದೆ ಹಾಗೂ ಇತರೆ ಇಲಾಖೆಗಳಲ್ಲಿನ ಕರ್ತವ್ಯಕ್ಕೆ ಸಹ ಗೃಹರಕ್ಷಕರನ್ನು ನಿಯೋಜಿಸಲಾಗುತ್ತಿದೆ.<br><br>ಪೌರರಕ್ಷಣೆಯು ಒಂದು ಸ್ವಯಂಸೇವಕ ಇಲಾಖೆಯಾಗಿದ್ದು, ಮಾನವ ನಿರ್ಮಿತ ಹಾಗೂ ಪ್ರಾಕೃತಿಕ ವಿಕೋಪಗಳಲ್ಲಿ ಜನರ ಜೀವನ ಮತ್ತು ಆಸ್ತಿ ಸಂರಕ್ಷಣೆ ಮಾಡುವ ಉದ್ದೇಶವನ್ನು ಹೊಂದಿರುತ್ತದೆ.<br><br>**ಅಗ್ನಿಶಾಮಕ ಮತ್ತು ತುರ್ತು ಸೇವೆಗಳು:–**<br>ಅಗ್ನಿಶಾಮಕ ಅಧಿನಿಯಮ–1964, ನಿಯಮಗಳ ಪ್ರಕಾರ<br><br>1. ಹೊಸದಾಗಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಿ ಅಗ್ನಿಶಮನ ವಾಹನಗಳ ಒದಗಿಸುವುದು ಹಾಗೂ ನಿರ್ವಹಿಸುವುದು.<br>2. ಅಗ್ನಿ ಹಾಗೂ ತುರ್ತು ಕರೆಗಳಿಗೆ ಸ್ಪಂದಿಸಿ ಮಾನವಜೀವ ಹಾಗೂ ಆಸ್ತಿ–ಪಾಸ್ತಿ ರಕ್ಷಣೆ.<br>3. ನಿಯಮಾನುಸಾರ ನಿಯಮ ಬಾಹಿರ ಕಟ್ಟಡಗಳಿಗೆ ದಂಡ ವಿಧಿಸುವುದು.<br>4. ಅಗ್ನಿ ಸುರಕ್ಷತಾ ಕ್ರಮಗಳ ಬಗ್ಗೆ ಅಣಕು ಪ್ರದರ್ಶನ, ಉಪನ್ಯಾಸಗಳು ಹಾಗೂ ಸಾರ್ವಜನಿಕರಿಗೆತರಬೇತಿ ನೀಡುವುದು.<br>5. ಅಗ್ನಿಶಾಮಕ ಸುರಕ್ಷತಾದೃಷ್ಟಿಯಿಂದ ವಿವಿಧ ಕಟ್ಟಡಗಳ ತಪಾಸಣೆ ನಡೆಸುವುದು ಈ ಕರ್ತವ್ಯ ಮತ್ತುಕಾರ್ಯನಿರ್ವಹಣೆಗೆಇಲಾಖೆಯಲ್ಲಿರುವರಚನೆಯನ್ನು ಲಗತ್ತಿಸಿದೆ.<br><br>ರಾಜ್ಯದಲ್ಲಿ ಸಂಭವಿಸುವ ಮಾನವ ನಿರ್ಮಿತ ಅಥವಾ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣೆಪಡೆ(NDRF)ಮಾರ್ಗದರ್ಶನದಂತೆ ಪರಿಹಾರ ಕಾರ್ಯಗಳನ್ನು ನಿರ್ವಹಿಸುತ್ತಿದೆ.<br><br>**ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ:–**<br>ಅನ್ವಯಿಸುವುದಿಲ್ಲ. |

...4

**ಅಭಿಯೋಗಗಳು ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ:-**

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಕರ್ನಾಟಕ ರಾಜ್ಯದಲ್ಲಿ ಒಳಾಡಳಿತ ಇಲಾಖೆಯ ವ್ಯಾಪ್ತಿಯಲ್ಲಿ ಪ್ರತ್ಯೇಕ ನಿರ್ದೇಶನಾಲಯವನ್ನು ಹೊಂದಿರುತ್ತದೆ. ಈ ಇಲಾಖೆಯು ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದು, ರಾಜ್ಯದ ಪರವಾಗಿ ಪೊಲೀಸ್ ಠಾಣೆಗಳ ಹಾಗೂ ಇತರೆ ಇಲಾಖೆಗಳ ಮುಖಾಂತರ ದಾಖಲಾಗುವ ಕ್ರಿಮಿನಲ್ ಪ್ರಕರಣಗಳನ್ನು ರಾಜ್ಯದ ವಿವಿಧ ಹಂತದ ನ್ಯಾಯಾಲಯಗಳಲ್ಲಿ ಇಲಾಖೆಯ ಅಭಿಯೋಜಕರುಗಳು ಪ್ರತಿನಿಧಿಸಿ ಪ್ರಕರಣ ನಡೆಸುತ್ತಾರೆ.

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಕರ್ನಾಟಕ ರಾಜ್ಯದಲ್ಲಿ ಅಭಿಯೋಜನಾ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ:ಲಾ:114:ಎಲ್ ಎಜಿ:72, ದಿನಾಂಕ:30.12.1972 ರ ಪ್ರಕಾರ ಸ್ಥಾಪನೆಯಾಗಿರುತ್ತದೆ.
ಸರ್ಕಾರದ ಆದೇಶ ಸಂಖ್ಯೆ:15:ಪಿಪಿಇ:73, ದಿನಾಂಕ:26.03.1973 ರಿಂದ ಕಾರ್ಯ ನಿರ್ವಹಿಸುತ್ತಿದೆ.
ಸರ್ಕಾರದ ಆದೇಶ ಸಂಖ್ಯೆ:ಲಾ:84:ಪಿಪಿಇ:75, ದಿನಾಂಕ:01.12.1975 ರ ಪ್ರಕಾರ ಪುನರ್ ರಚನೆಯಾಗಿರುತ್ತದೆ.
ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಸಿಎ 07 ಎಆರ್ ಬಿ 2004 ದಿಃ 23/09/2004ರ ಪ್ರಕಾರ ಈ ಇಲಾಖೆಯನ್ನು ಒಳಾಡಳಿತ ಇಲಾಖೆಯ ಕಾರ್ಯವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ.

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಸರ್ಕಾರದ ಪರವಾಗಿ ಅಪರಾಧ ಪ್ರಕರಣಗಳಲ್ಲಿ ಮ್ಯಾಜಿಸ್ಟ್ರೇಟ್ ಹಾಗೂ ಸತ್ರ ನ್ಯಾಯಾಲಯಗಳ ಮುಂದೆ ಅಭಿಯೋಜನಾ ಕಾರ್ಯ ಕೈಗೊಳ್ಳುತ್ತದೆ.

ನ್ಯಾಯಾಲಯದಲ್ಲಿ ಆರೋಪಿಗಳು ಬಿಡುಗಡೆಗೊಂಡ/ ದೋಷಮುಕ್ತಗೊಂಡ ಪ್ರಕರಣಗಳ ತೀರ್ಪುಗಳು/ ಆದೇಶಗಳ ನ್ನು ಪರಿಶೀಲಿಸಿ ಅಭಿಪ್ರಾಯವನ್ನು ನೀಡಿ ಮೇಲ್ಮನವಿ/ ಪುನರ್ ವಿಮರ್ಷಾ ಅರ್ಜಿ ಸಲ್ಲಿಸುವ / ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಕಾರ್ಯ ಈ ಇಲಾಖೆಯದ್ದಾಗಿರುತ್ತದೆ.

ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ.ಎಂ ನ್ಯಾಯಾಲಯಗಳಲ್ಲಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರುಗಳು, ಸತ್ರ ನ್ಯಾಯಾಲಯಗಳಲ್ಲಿ ಸರ್ಕಾರಿ ಅಭಿಯೋಜಕರುಗಳು ಸರ್ಕಾರದ ಪರವಾಗಿ ದಾಖಲಾದ ಅಪರಾಧ ಪ್ರಕರಣಗಳನ್ನು ನಡೆಸುತ್ತಾರೆ. ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಿಂದ ಭ್ರಷ್ಟಾಚಾರ ನಿಗ್ರಹ ದಳ, ಪೊಲೀಸ್ ಇಲಾಖೆ ಹಾಗೂ ಸರ್ಕಾರದ ಇತರೆ ಇಲಾಖೆಗಳಿಗೆ ಉಪ ನಿರ್ದೇಶಕರು ಹಾಗೂ ಸರ್ಕಾರಿ ಅಭಿಯೋಜಕರುಗಳನ್ನು ನಿಯೋಜಿಸಲಾಗುತ್ತದೆ.

...5

| | |
|---|---|
| | ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಮುಖ್ಯಸ್ಥರು ನಿರ್ದೇಶಕರಾಗಿದ್ದು, ಉಪ ನಿರ್ದೇಶಕರುಗಳು ಹಾಗೂ ಕಾನೂನು ಅಧಿಕಾರಿ(ಹಿರಿಯ/ಕಿರಿಯ) ರವರುಗಳು ಆಡಳಿತ ಹಾಗೂ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ನಿರ್ದೇಶಕರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.<br><br>**ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ (ನಿ):-**<br>ಈ ನಿಗಮವು ಒಳಾಡಳಿತ ಇಲಾಖೆಯ ಅಧೀನದಲ್ಲಿದ್ದು, ಕಂಪನಿ ಕಾಯ್ದೆಯಡಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿಗಮದ ಕಾರ್ಯಗಳಾದ ಇಡಿಗಂಟಿನ ರೂಪದಲ್ಲಿ ಪೊಲೀಸ್ ಠಾಣೆ, ಬಂದಿಖಾನೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ವಸತಿ/ವಸತಿಯೇತರ ಕಟ್ಟಡಗಳನ್ನು ಅವಶ್ಯಕತೆಗಳಿಗನುಗುಣವಾಗಿ ಕಟ್ಟಡಗಳನ್ನು ನಿರ್ಮಿಸುವ ಮೂಲಕ ಗ್ರಾಹಕರು ಬಯಸುವ ಉತ್ತಮ ಗುಣಮಟ್ಟದ ವೆಚ್ಚ ನಿಯಂತ್ರಿತ ಹಾಗೂ ಪರಿಸರ ಸ್ನೇಹಿಯಾದ ಯೋಜನೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಿ ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸುತ್ತದೆ ಹಾಗೂ ಈ ಆಡಳಿತವನ್ನು ಅಳವಡಿಸಿಕೊಂಡು ಪಾರದರ್ಶಕತೆಯಿಂದ ಕೂಡಿದ ಕಾಮಗಾರಿಗಳನ್ನು ನೀಡಲು ಹಾಗೂ ಸಾರ್ವಜನಿಕರಿಗೆ ಮಾಹಿತಿ ಹಕ್ಕನ್ನು ಒದಗಿಸಲು ಬದ್ಧವಾಗಿದೆ. |

ಸಂಖ್ಯೆ: ಒಇ 21 ಎಸ್ಎಎಸ್‌ಹೆಚ್ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು